Voice of Jagadguru
advaitam paramanandam
an e-magazine on advaita

# ಜಗದ್ಗುರು ವಾಣಿ

( An Unit of the e magazine Voice of Jagadguru)

## ಅನುಗ್ರಹ ಭಾಷಣ

### ಗುರುವಿನ ಮಾರ್ಗದರ್ಶನ ಯಾವಾಗಲೂ ಅತ್ಯಗತ್ಯ

ಜೀವನದಲ್ಲಿ ಮನುಷ್ಯನು ತನ್ನ ಸ್ವಂತ ಬುದ್ಧಿವಂತಿಕೆಯಿಂದ ತನ್ನ ಜೀವನವನ್ನು ರೂಪಿಸಲು ಸಾಧ್ಯವಾಗದ ಅನೇಕ ಸಂದರ್ಭಗಳಿವೆ. ಇಂತಹ ಸಂದರ್ಭಗಳಲ್ಲಿ ಗುರುವಿನ ಮಾರ್ಗದರ್ಶನ ಅತ್ಯಗತ್ಯ. ಒಬ್ಬ ಗುರು ಮಾತ್ರ ಅವನಿಗೆ ಜೀವನದಲ್ಲಿ ಸಾರ್ಥಕತೆಯನ್ನು ಸಾಧಿಸುವ ಮಾರ್ಗವನ್ನು ತೋರಿಸಿ, ಅವನ ಜೀವನ ಸಾಫಲ್ಯ ಹೊಂದಲು ಮತ್ತು ಶುದ್ಧವಾಗಿಸಲು ದಾರಿ ತೋರಬಲ್ಲವಾರಾಗಿದ್ದಾರೆ .

ಗುರು-ಶಿಷ್ಯ ಸಂಪ್ರದಾಯವು ಬಹಳ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದೆ. ಹಿಂದಿನ ದಿನಗಳಲ್ಲಿ, ಪ್ರತಿಯೊಬ್ಬ ರಾಜನು ತನ್ನ ಗುರುಗಳ ಸಲಹೆಗೆ ಅನುಗುಣವಾಗಿ ಮಾತ್ರ ಆಳ್ವಿಕೆ ನಡೆಸುತ್ತಿದ್ದನು.



ನಿಜವಾದ ಗುರುವಿಗೆ ಯಾರ ಮೇಲೂ ಮೋಹವೂ ಇಲ್ಲ, ದ್ವೇಷವೂ ಇರುವುದಿಲ್ಲ. ಶಿಷ್ಯನನ್ನು ಮೋಕ್ಷದ ಹಾದಿಯಲ್ಲಿ ನಡೆಸುವುದು ಅವರ ಏಕೈಕ ಉದ್ದೇಶವಾಗಿದೆ.

ಶಿಷ್ಯನಿಗೆ ಗುರುವಿನ ಮೇಲೆ ಅಚಲವಾದ ನಂಬಿಕೆ ಇರಬೇಕು. ಗುರುವು ಅವನನ್ನು ಪರೀಕ್ಷಿಸಿದರೆ, ಅವನು ಗುರುವನ್ನು ಪರೀಕ್ಷಿಸುವ ಸಾಹಸ ಮಾಡಬಾರದು. ಗುರುವಿನ ಮೇಲಿನ ಸಂಪೂರ್ಣ ಭಕ್ತಿ ಮತ್ತು ಸಂಪೂರ್ಣ ನಂಬಿಕೆ ನಿಜವಾದ ಶಿಷ್ಯನ ಲಕ್ಷಣಗಳಾಗಿವೆ. ಅಂತಹ ಶಿಷ್ಯನು ಮಾತ್ರ ಗುರುವಿನ ಸಂಪೂರ್ಣ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ಗುರುವಿನ ಕೃಪೆಯೊಂದಿಗೆ ಶಿಷ್ಯನ ಶ್ರದ್ಧೆ ಕೂಡಿದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎಂಬುದು ಅನುಭವದ ಮಾತು. ಶಂಕರರು "ಭಜ ಗೋವಿಂದಂನ"ಲ್ಲಿ ಹೇಳುತ್ತಾರೆ: ಗುರುಚರಣಾಂಬುಜನಿರ್ಭರಭಕ್ತಃ ಸಂಸಾರದಚಿರದ್ಭವ ಮುಕ್ತಃ |

(ಜಗದ್ಗುರು ಶಂಕರಾಚಾರ್ಯರು ಪರಮಪೂಜ್ಯ ಜೇಷ್ಠ ಮಹಾಸನ್ನಿಧಾನಂ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮೀಜಿ ಮತ್ತು ಜಗದ್ಗುರು ಶಂಕರಾಚಾರ್ಯರು ಪರಮಪೂಜ್ಯ ಮಹಾಸನ್ನಿಧಾನಂ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ, 1974)

ಅದೇನೆಂದರೆ, ಗುರುವಿನ ಚರಣಕಮಲಗಳಲ್ಲಿ ಅಚಲವಾದ ಭಕ್ತಿಯುಳ್ಳವನು ಸಂಸಾರವೆಂಬ ಸಾಗರವನ್ನು ಬಹಳ ಶೀಘ್ರವಾಗಿ ದಾಟುತ್ತಾನೆ.

ಎಲ್ಲರೂ ಅಂತಹ ಗುರುಭಕ್ತಿಯನ್ನು ಬೆಳೆಸಿಕೊಳ್ಳಲಿ ಮತ್ತು ಗುರುವಿನ ಅನುಗ್ರಹದ ಮೂಲಕ ಶ್ರೇಯಸ್ಸನ್ನು ಪಡೆಯಲಿ ಎಂದು ನಾವು ಆಶೀರ್ವದಿಸುತ್ತೇವೆ.

--- ಜಗದ್ಗುರು ಶಂಕರಾಚಾರ್ಯ ಪರಮಪೂಜ್ಯ ಮಹಾಸನ್ನಿಧಾನಂ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿ



# Voice of Jagadguru

advaitam paramanandam

an e-magazine on advaita



## ಜಗದ್ಗುರು ವಾಣಿ

( An Unit of the e magazine Voice of Jagadguru)

# ||ಆತ್ಮಸಾಕ್ಷಾತ್ಕಾರ:||

## ||ಆತ್ಮಬೋಧ:||

आत्मनः सच्चिदंशश्च बुद्धेर्वृत्तिरिति द्वयम् ।
संयोज्य चाविवेकेन जानामीति प्रवर्तते ॥ २५ ॥

ಆತ್ಮನಃ ಸಚ್ಚಿದಂಶಶ್ಚ ಬುದ್ಧೇರ್ವೃತ್ತಿರಿತಿ ದ್ವಯಂ .
ಸಂಯೋಜ್ಯ ಚಾವಿವೇಕೇನ ಜಾನಾಮೀತಿ ಪ್ರವರ್ತತೇ .. ೨೫ ..




ಆತ್ಮದ ಅಸ್ತಿತ್ವ-ಜ್ಞಾನ-ಅಂಶ ಮತ್ತು ಬುದ್ಧಿಯ ವಿಚಾರ-ತರಂಗ ಎರಡರ ವಿವೇಚನೆಯಿಲ್ಲದ ಮಿಶ್ರಣದಿಂದ "ನನಗೆ ಗೊತ್ತು" ಎಂಬ ಕಲ್ಪನೆಯು ಉದ್ಭವಿಸುತ್ತದೆ.

आत्मनो विक्रिया नास्ति- बुद्धेर्बोधो न जात्विति ।
जीवः सर्वमलं ज्ञात्वा ज्ञाता द्रष्टेति मुह्यति ॥ २६ ॥

ಆತ್ಮನೋ ವಿಕ್ರಿಯಾ ನಾಸ್ತಿ- ಬುದ್ಧೇರ್ಬೋಧೋ ನ ಜಾತ್ವಿತಿ .
ಜೀವಃ ಸರ್ವಮಲಂ ಜ್ಞಾತ್ವಾ ಜ್ಞಾತಾ ದ್ರಷ್ಟೇತಿ ಮುಹ್ಯತಿ .. ೨೬ ..

ಆತ್ಮನು ಎಂದಿಗೂ ಏನನ್ನೂ ಮಾಡುವುದಿಲ್ಲ, ಮತ್ತು ಚಿತ್ ಅದರ ಸ್ವಂತ ಇಚ್ಛೆಯ ಬುದ್ಧಿಯು 'ನನಗೆ ಗೊತ್ತು' ಎಂಬ ಅನುಭವಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಆದರೆ ನಮ್ಮಲ್ಲಿರುವ ಪ್ರತ್ಯೇಕತೆಯು ಭ್ರಾಂತಿಯಿಂದ ತನ್ನನ್ನು ತಾನು ನೋಡುವವನು ಮತ್ತು ಜ್ಞಾನಿ ಎಂದು ಭಾವಿಸುತ್ತದೆ.

ಜಗದ್ಗುರು ಶಂಕರಾಚಾರ್ಯ ಪರಮಪೂಜ್ಯ ಮಹಾಸನ್ನಿಧಾನಂ ಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿ

रज्जुसर्पवदात्मानं जीवो ज्ञात्वा भयं वहेत् ।
नाहं जीवः परात्मेति ज्ञातश्चेन्निर्भयो भवेत् ॥ २७ ॥

ರಜ್ಜುಸರ್ಪವದಾತ್ಮಾನಂ ಜೀವೋ ಜ್ಞಾತ್ವಾ ಭಯಂ ವಹೇತ್ .
ನಾಹಂ ಜೀವಃ ಪರಾತ್ಮೇತಿ ಜ್ಞಾತಶ್ಚೇನ್ನಿರ್ಭಯೋ ಭವೇತ್ .. ೨೭ ..

ಹಗ್ಗವನ್ನು ಹಾವು ಎಂದು ಪರಿಗಣಿಸುವ ವ್ಯಕ್ತಿಯು ಭಯದಿಂದ ಆವರಿಸಲ್ಪಟ್ಟಂತೆ, ತನ್ನನ್ನು ಅಹಂಕಾರ (ಜೀವ) ಎಂದು ಪರಿಗಣಿಸುವವನು ಭಯದಿಂದ ಆವರಿಸಯಲ್ಪಡುತ್ತಾನೆ. ನಮ್ಮಲ್ಲಿರುವ ಅಹಂ-ಕೇಂದ್ರಿತ ವ್ಯಕ್ತಿತ್ವವು ನಾನು ಜೀವವನಲ್ಲ ಆದರೆ ಸ್ವತಃ ಪರಮಾತ್ಮ ಎಂದು ಅರಿತುಕೊಳ್ಳುವ ಮೂಲಕ ನಿರ್ಭಯತೆಯನ್ನು ಮರಳಿ ಪಡೆಯುತ್ತದೆ.

(ಮುಂದುವರಿಯುತ್ತದೆ....)

# ಜಗದ್ಗುರು ವಾಣಿ

( An Unit of the e magazine Voice of Jagadguru)

## ಸಜ್ಜನರ ಸಹವಾಸ

### ಸಂಪ್ರದಾಯ: ಮಗಳ ಮದುವೆ

**पिता हि प्रभुरस्माकं दैवतं परमं हि न: ।**
**यस्य नो दास्यति पिता, स नो भर्ता भविष्यति ॥**
**(संस्कार-संस्कृति {कन्यादान} वा.रामा./बालकाण्ड/३२/२१)**

ಪಿತಾ ಹಿ ಪ್ರಭುರಸ್ಮಾಕಂ ದೈವತಂ ಪರಮಂ ಹಿ ನ: .
ಯಸ್ಯ ನೋ ದಾಸ್ಯತಿ ಪಿತಾ, ಸ ನೋ ಭರ್ತಾ ಭವಿಷ್ಯತಿ ..
(ಸಂಸ್ಕಾರ-ಸಂಸ್ಕೃತಿ {ಕನ್ಯಾದಾನ} ವಾ.ರಾಮಾ./ಬಾಲಕಾಂಡ/೩೨/೨೧)

ಹೆಣ್ಣುಮಕ್ಕಳು ಹೇಳುತ್ತಾರೆ " ನಮ್ಮ ತಂದೆಯೇ ನಮಗೆ ದೊರೆಯು ಮತ್ತು ಯಾರಿಗೆ ನಮ್ಮ ತಂದೆ ನಮನ್ನು ನೀಡಲು ನಿರ್ಧರಿಸುತ್ತಾರೆಯೋ, ನಾವು ಅವರನ್ನು ನಮ್ಮ ಪತಿಯಾಗಿ ಸ್ವೀಕರಿಸುತ್ತೇವೆ".

### ತಿರಸ್ಕರಿಸಬೇಕಾದುದು: ಕೃತಘ್ನತೆ

**अभिनवमधुलोभभावितस्तथा परिचुम्ब्य चूतमञ्जरीम् ।**
**कमलवसतिमात्रनिर्वृतो मधुकर! विस्मृतोऽसि एनां कथम् ॥**
**(निन्दनीय {कृतघ्नता} अभिज्ञानशा./५/८)**



ಅಭಿನವಮಧುಲೋಭಭಾವಿತಸ್ತಥಾ ಪರಿಚುಂಬ್ಯ ಚೂತಮಂಜರೀಂ .
ಕಮಲವಸತಿಮಾತ್ರನಿರ್ವೃತೋ ಮಧುಕರ! ವಿಸ್ಮೃತೋಽಸಿ ಏನಾಂ ಕಥಂ ..
(ನಿಂದನೀಯ {ಕೃತಘ್ನತಾ} ಅಭಿಜ್ಞಾನಶಾ./೫/೮)

ಓ ದುಂಬಿಗಳೇ! ಮಾವಿನ ಹೂವುಗಳ ಗೊಂಚಲಿನ ರಸವನ್ನು ತುಂಬಿಕೊಂಡು, ಹೊಸ ಜೇನಿನ ಆಸೆಗಾಗಿ ಕಮಲದ ಗೊಂಚಲಿಗೆ ನಿಮ್ಮ ದುರಾಸೆಯಿಂದ ತೆರಳಿ ಮೌನವಾಗಿಬಿಟ್ಟಿರಿ. ಮಾವಿನ ಹೂವುಗಳನ್ನು ನೀವು ಹೇಗೆ ಮರೆತಿದ್ದೀರಿ? (ಈ ಪದ್ಯವು ಕೃತಘ್ನತೆಯ ದೋಷವನ್ನು ತೋರಿಸುತ್ತದೆ).

ಮೈಸೂರು ಸಂಸ್ಥಾನದ ರಾಜಮಾತೆ ಶ್ರೀಮತಿ ಪ್ರಮೋದಾ ದೇವಿ ಮತ್ತು ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಉಭಯ ಜಗದ್ಗುರುಗಳ ವಿಜಯಯಾತ್ರೆಯ ಅಂಗವಾಗಿ ೨೮ ಡಿಸೆಂಬರ್ ೨೦೧೫ರಲ್ಲಿ ಶಿವಮೊಗ್ಗೆಯ ಸಮೀಪದ ಕರಣಗಿರಿಯಲ್ಲಿ ತಮ್ಮ ಗೌರವವನ್ನು ಜಗದ್ಗುರುಗಳಿಗೆ ಸಮರ್ಪಿಸಿದ ಸಂದರ್ಭ.



# Voice of Jagadguru

advaitam paramanandam an e-magazine on advaita



## ಜಗದ್ಗುರು ವಾಣಿ

( An Unit of the e magazine Voice of Jagadguru)

### ಅಪರೋಕ್ಷಾನುಭೂತಿ

देहोऽहमित्ययं मूढो मत्वा तिष्ठत्यहो जनः ।
ममायमित्यपि ज्ञात्वा घटद्रष्टेव सर्वदा ॥ २३॥

ದೇಹೋಽಹಮಿತ್ಯಯಂ ಮೂಢೋ ಮತ್ವಾ ತಿಷ್ಠತ್ಯಹೋ ಜನಃ .
ಮಮಾಯಮಿತ್ಯಪಿ ಜ್ಞಾತ್ವಾ ಘಟದ್ರಷ್ಟೇವ ಸರ್ವದಾ .. ೨೩..




ಒಬ್ಬ ವ್ಯಕ್ತಿಯು ಅಜ್ಞಾನದಿಂದ "ತಾನು ದೇಹ" ಎಂಬ ಕಲ್ಪನೆಯಿಂದ ತೃಪ್ತನಾಗುವುದು ಎಷ್ಟು ವಿಚಿತ್ರವಾಗಿದೆ, ಆದರೆ ಅವನು ಮಡಕೆಯನ್ನು ನಾನು ನೋಡುವವನಾಗಿದ್ದೇನೆ (ಅದನ್ನು ಅವನಿಂದ ಬೇರೆಯಾಗಿರುವುದು ಎಂದು ತಿಳಿದಿರುವವನಾಗಿದ್ದಾನೆ) !

2024 ರ ಜ.31 ರಂದು ರಾಮಾಮೃತ ತರಂಗಿಣಿ ಟ್ರಸ್ಟ್ ಆಯೋಜಿಸಿರುವ 16 ನದಿಗಳ ನೀರನ್ನು ಹೊಂದಿರುವ ಕಲಶಗಳಿಗೆ ಶೃಂಗೇರಿಯಲ್ಲಿ ಜಗದ್ಗುರು ಶ್ರೀ ಸನ್ನಿಧಾನಂ ಮಂಗಳಾರತಿ ಮಾಡುತ್ತಾರೆ.

ब्रह्मैवाहं समः शान्तः सच्चिदानन्दलक्षणः ।
नाहं देहो ह्यसद्रूपो ज्ञानमित्युच्यते बुधैः ॥ २४॥

ಬ್ರಹ್ಮೈವಾಹಂ ಸಮಃ ಶಾಂತಃ ಸಚ್ಚಿದಾನಂದಲಕ್ಷಣಃ .
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ .. ೨೪..

ನಾನು ದೇಹ ಹಾಗು ರೂಪವು ಅಲ್ಲ. ನಾನು ನಿಜವಾಗಿಯೂ ಬ್ರಹ್ಮ, ಸಮಚಿತ್ತ, ಶಾಂತ ಮತ್ತು ಸ್ವಭಾವತಃ ಸಂಪೂರ್ಣ ಅಸ್ತಿತ್ವ, ಜ್ಞಾನ ಮತ್ತು ಆನಂದವಾಗಿದ್ದೇನೆ.

(ಮುಂದುವರಿಯುತ್ತದೆ...)

# ಜಗದ್ಗುರು ವಾಣಿ

( An Unit of the e magazine Voice of Jagadguru)

## ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮೀಜಿಯವರ ಬೋಧನೆಗಳು.

### ದೇವರ ಮಹತ್ವ

★ ಆರಾಧನೆಯ ವಸ್ತುವಿನ ಸ್ವರೂಪವು ಆರಾಧಕನ ಸ್ವಭಾವವನ್ನು ಅವಲಂಬಿಸುತ್ತದೆ (ಅಂದರೆ. ಆಧ್ಯಾತ್ಮಿಕ ಸಾಮರ್ಥ್ಯ)

ತಮ್ಮಲ್ಲಿರುವ ಆತ್ಮವನ್ನು ಗ್ರಹಿಸಲು ಸಾಧ್ಯವಾಗದವರಿಗೆ, ಉಪಾಸ್ಯ (ಅಂದರೆ, ಭಕ್ತಿಯ ವಸ್ತು) ಭೌತಿಕ ವಿಗ್ರಹವಾಗಿದೆ. ಜಡ ವಸ್ತುವನ್ನು ಪೂಜೆಯ ವಸ್ತುವಾಗಿ ಸ್ವೀಕರಿಸಲು ನಿರಾಕರಿಸುವವರಿಗೆ, ಉಪಾಸ್ಯವು ಸೂರ್ಯ ದೇವತೆಯಾಗಿದೆ. ಈ ಪರಿಕಲ್ಪನೆಯು ಸಹ ಭಕ್ತನನ್ನು ತೃಪ್ತಿಪಡಿಸದಿದ್ದಾಗ, ಉಪಾಸ್ಯನು ಹಿರಣ್ಯಗರ್ಭನು (ಅಂದರೆ, ಇಡೀ ಜಗತ್ತು.) ಅಂತಹ ಪರಿಕಲ್ಪನೆಯು ಸಹ ಅತೃಪ್ತಿಕರವಾಗಿ ತೋರಿದಾಗ, ಭಕ್ತನು ಪರಮ ಭಗವಂತನನ್ನು ಆರಾಧಿಸುತ್ತಾನೆ ಎಂದು ಹೇಳಲಾಗುತ್ತದೆ. ಈ ಪರಿಕಲ್ಪನೆಯೂ ಸೀಮಿತವಾಗಿದೆ ಎಂದು ಭಕ್ತನಿಗೆ ಅನಿಸಿದಾಗ, ನಿಜವಾಗಿಯೂ ಪೂಜಿಸಲ್ಪಡುವವನು ಅನಂತ ಬ್ರಹ್ಮನೇ ಎಂದು ನಾವು ಅವನಿಗೆ ಹೇಳುತ್ತೇವೆ.

ಇಂತಹ ಪರಮಸತ್ಯವಾದ, ನಿರಾಕಾರವಾದ, ಸಂಪೂರ್ಣ "ಬ್ರಹ್ಮನ್" ನನ್ನು ಸಂಧ್ಯಾವಂದನೆಯಲ್ಲಿ ಆರಾಧಿಸಲಾಗುತ್ತದೆ. ಆರಾಧನೆಯ ವಸ್ತುವು ಯಾವಾಗಲೂ ಒಂದೇ, ಆದರೆ ಅದರ ನಿಖರವಾದ ಸ್ವರೂಪವು ಆರಾಧಿಸುವವನ ಸಾಮರ್ಥ್ಯದೊಂದಿಗೆ ಬದಲಾಗುತ್ತದೆ.



# Voice of Jagadguru

advaitam paramanandam

an e-magazine on advaita



## ಜಗದ್ಗುರು ವಾಣಿ

( An Unit of the e magazine Voice of Jagadguru)

ನಮ್ಮ ಈ ಮೇಲ್ ವಿಳಾಸ : Info@voiceofjagadguru.com

| ಸಂಪಾದಕೀಯ ಮಂಡಳಿ | | |
|---|---|---|
| ಶ್ರೀ ಪಿ. ಎ. ಮುರಳಿ | ಗೌರವ ಸಲಹೆಗಾರರು | ಆಡಳಿತಾಧಿಕಾರಿ ಮತ್ತು ಸಿಇಒ, ಶ್ರೀ ಶೃಂಗೇರಿ ಮಠ ಮತ್ತು ಅದರ ಪ್ರಾಪರ್ಟೀಸ್, ಶೃಂಗೇರಿ |
| ಶ್ರೀ ಎಸ್. ಎನ್. ಕೃಷ್ಣಮೂರ್ತಿ | ಗೌರವ ಸಂಪಾದಕರು | ಶ್ರೀ ಶೃಂಗೇರಿ ಮಠ, ಶೃಂಗೇರಿ |
| ಶ್ರೀ ತಂಗಿರಾಲ ಶಿವಕುಮಾರ್ ಶರ್ಮಾ | ಗೌರವ ಸಂಪಾದಕರು | ಶ್ರೀ ಶೃಂಗೇರಿ ಮಠ, ಶೃಂಗೇರಿ |
| ಶ್ರೀಮತಿ ಬಿ. ಶ್ರೀಮತಿ ವೀರಮಣಿ | ಮುಖ್ಯ ಸಂಪಾದಕರು ಮತ್ತು ಅಂತರ್ಜಾಲ ವಿಭಾಗದ ಸಹ ನಿರ್ದೇಶಕರು | ತಿರುನೆಲ್ವೇಲಿ, ತಮಿಳುನಾಡು |
| ಶ್ರೀ ಬಿ. ವಿಜಯ್ ಆನಂದ್ | ಅಂತರ್ಜಾಲ ವಿಭಾಗದ ನಿರ್ದೇಶಕರು | ಕೊಯಮತ್ತೂರು, ತಮಿಳುನಾಡು |
| ಶ್ರೀ ಎಸ್. ಆರ್. ಲಕ್ಷ್ಮೀನಾರಾಯಣ | ಗೌರವ ಸಂಪಾದಕರು | ಮೈಸೂರು, ಕರ್ನಾಟಕ |
| ಶ್ರೀ ಕೆ. ಎಂ. ಕಾಶಿವಿಶ್ವನಾಥನ್ | ಗೌರವ ಸಂಪಾದಕರು | ತಿರುನೆಲ್ವೇಲಿ, ತಮಿಳುನಾಡು |